O.S. 15/2024 PW-1

ದಿನಾಂಕಃ 03.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಚಿಕ್ಕಪ್ಪನ ಮಗನಾದ ಸಿದ್ದಲಿಂಗಪ್ಪಬ ಮಗನ ಹೆಸರು ಸಿದ್ದಯ್ಯ. ಸಿದ್ದಲಿಂಗಪ್ಪರವರ ಮಗಳ ಹೆಸರು ಅನುಸುಯಮ್ಮ ಎಂದರೆ ಸರಿ. ಕೋದಂಡರಾಮಯ್ಯ ರವರ ಮಗನ ಹೆಸರು ಸಿದ್ದಯ್ಯ ಎಂದರೆ ಸರಿ. ವಂಶವೃಕ್ಷದಲ್ಲಿ ಇವರ ಹೆಸರನ್ನು ತಪ್ಪಾಗಿ ನಮೂದಿಸಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಸಣ್ಣಸಿದ್ದಪ್ಪ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆಯ ಹೆಸರು ಸಿದ್ದಪ್ಪ ಎಂದು ಬರೆಸಿದ್ದೇವೆ ಎಂದರೆ ಸರಿ. ನನ್ನ ತಂದೆ ಮತ್ತು ನಮ್ಮ ಚಿಕ್ಕಪ್ಪ ಒಟ್ಟು ಕುಂಟುಂಬದಲ್ಲೆ ವಾಸವಿದ್ದರು ಎಂದರೆ ಸರಿ. ನನ್ನ ತಂದೆ ಮತ್ತು ತಾಯಿ ಮೃತಪಟ್ಟ ನಂತರ ನಮ್ಮ ಚಿಕ್ಕಪ್ಪರವರು ನನ್ನನ್ನು ಸಾಕಿದರು ಎಂದರೆ ಸರಿಯಲ್ಲ. ಈ ದಾವೆಯ ಸ್ವತ್ತು ಮೂಲತಃ ನನ್ನ ತಾತನ ಸಿದ್ದಲಿಂಗಪ್ಪರವರಿಗೆ ಸೇರಿದ್ದು ಎಂದರೆ ಸರಿ. ದಾವಾ ಸ್ವತ್ತನ್ನು ನಾವು ಮತ್ತು ಪ್ರತಿವಾದಿಗಳು ಜಂಟಿ ಸ್ವಾ ಧೀನಾದಲ್ಲಿದ್ದೇವೆ ಎಂದರೆ ಸರಿ. 1976 ರಲ್ಲಿ ನಾನು ಮತ್ತು ಸಿದ್ದಲಿಂಗಪ್ಪ ರವರು ಎರಡು ಜಮೀನನ್ನು ಖರೀದಿಸಿದ್ದೆವು ಎಂದರೆ ಸರಿಯಲ್ಲ. ಇದರ ಕ್ರಯಪತ್ರವನ್ನು ನಾವು ಪ್ರತ್ಯೇಕವಾಗಿ ಮಾಡಿಸಿಕೊಂಡಿರುತ್ತೇವೆ. ಸದರಿ ಕ್ರಯಪತ್ರವನ್ನು 1956ನೇ ಇಸವಿಯಲ್ಲಿ ನೋಂದಣಿ ಮಾಡಿಸಿಕೊಂಡಿರುತ್ತೇವೆ. ಸದರಿ ಜಮೀನುಗಳು ನಮ್ಮ ಸಿದ್ದಲಿಂಗಪ್ಪರವರ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ. ಸರ್ವೆ ನಂ 147 ಮತ್ತು 148 ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಗಳ ಮನೆಗಳು ನನ್ನ ತಾತನ ಕಡೆಯಿಂದ ಬಂದಿರುತ್ತದೆ. ಸದರಿ ಮನೆಗಳು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ 127 ನ್ನು ನನ್ನ ಹಾಗೂ ಪ್ರತಿವಾದಿಗಳ ಹೆಸರಿಗೆ ಖಾತೆ ಮಾಡಲಾಗಿದೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.